ಸೆಲ್ ಗಾಡಿಗಳನ್ನು ಓಡಿಸುವ ನಾವೂ ಸಹ ಭಾಗೀದಾರರು!

ಡೈನೊಸಾರಸ್‌ಗಳು ಭೂಮಿಯ ಮೇಲೆ ಓಡಾಡಿದ್ದವು ಎಂದು ನಾವು ಕೇಳಿದ್ದೇವೆ. ನ್ಯೂಝಿಲೆಂಡ್ ದ್ವೀಪದಲ್ಲಿದ್ದ ಮಾವೊ ಹಕ್ಕಿಗಳ ನಾಮಾವಶೇಷದ ಕಥೆಯೂ ನಮಗೆ ಗೊತ್ತು. 'ಈ ಸಾಲಿಗೆ ಇನ್ನೊಂದು ಜೀವಿ ಸೇರ್ಪಡೆಯಾಗಬಾರದು, ನಮ್ಮ ತಲೆಮಾರಿನಲ್ಲಿ ಹಾಗೆ ಆಗಲು ಬಿಡುವುದಿಲ್ಲ' ಎನ್ನುವ ಕಾಳಜಿ ಕೋಟ್ಯಂತರ ಜನರದ್ದು. ಆದರೂ ಅಂಥದ್ದೊಂದು ಅಪಾಯ ಇದೀಗ ಎದುರಾಗಿದೆ.

## ಸಂತಾನೋತ್ಪತ್ತಿಗೆ ಧಕ್ಕೆ

'ವಾಯುಮಾಲಿನ್ಯ ಇದೇ ವೇಗದಲ್ಲಿ ಮುಂದುವರಿದರೆ, '2040ರ ವೇಳೆಗೆ ಬಹುತೇಕ ಹಿಮಕರಡಿಗಳು ಸಂತಾನೋತ್ಪತ್ತಿ ಸಾಮರ್ಥ್ಯ ಕಳೆದುಕೊಳ್ಳುತ್ತವೆ. ಸ್ಥಳೀಯವಾಗಿ ಅವುಗಳ ವಂಶಗಳು ಮುಂದುವರಿಯುವುದಿಲ್ಲ' ಎಂದು 'ನೇಚರ್ ಕ್ಲೈಮೇಟ್ ಚೇಂಜ್'ನ ಲೇಖನ ಉಲ್ಲೇಖಿಸಿದೆ.

ವಿಶ್ವದಲ್ಲಿ ಪ್ರಸ್ತುತ ಸುಮಾರು 26,000 ಹಿಮಕರಡಿಗಳು ಉಳಿದುಕೊಂಡಿವೆ. ನಾರ್ವೆಯ ಸ್ವಾಲ್‌ಬಾರ್ಡ್‌ನಿಂದ ಅಲಸ್ಕಾ ಮತ್ತು ಸೈಬಿರಿಯಾ ನಡುವಣ ಕೆನಡಾದ ಚುಕ್‌ಚಿ ಸಮುದ್ರದವರೆಗೂ ಈ ಸಂತತಿ ಹರಡಿಕೊಂಡಿದೆ. ಭೂಮಿಯ ಮೇಲೆ ಅವಕ್ಕೆ ಪೂರಕ ವಾತಾವರಣ ಇಲ್ಲ. ಹೀಗಾಗಿ ಸಾಗರವನ್ನೇ ಆಹಾರಕ್ಕೆ ಅವಲಂಬಿಸಿವೆ. ಹೆಪ್ಪುಗಟ್ಟಿದ ಸಮುದ್ರದ ಬಿರುಕುಗಳಲ್ಲಿ ಗಾಳಿ ಹೀರಲು ಬರುವ ಸೀಲ್‌ಗಳನ್ನು (ಸಮುದ್ರ ಸಿಂಹ) ಬೇಟೆಯಾಡುವುದನ್ನು ರೂಢಿಸಿಕೊಂಡಿವೆ. ಆದರೆ ವಾತಾವರಣದ ಬದಲಾವಣೆಯಿಂದ ಸಮುದ್ರವನ್ನು ಆವರಿಸಿರುವ ಮಂಜುಗಡ್ಡೆ ಕರಗುತ್ತಿದೆ. ಅದೇ ಅನುಪಾತದಲ್ಲಿ ಬೇಟೆ ಸಾಧ್ಯತೆಯೂ ಕ್ಷೀಣಿಸಿ ಹಿಮದ ಕರಡಿಗಳ ಸಂಖ್ಯೆಯೂ ಕಡಿಮೆಯಾಗುತ್ತಿದೆ.

'ವಾತಾವರಣದ ಬದಲಾವಣೆಯಿಂದ ಹಿಮಕರಡಿಗಳಿಗೆ ತೊಂದರೆಯಾಗುತ್ತಿರುವುದು ನಿಜ' ಎನ್ನುವುದು ಟೊರೊಂಟೊ ಸ್ಕಾರ್‌ಬೊರೊ ವಿಶ್ವವಿದ್ಯಾಲಯದ ಜೀವಶಾಸ್ತ್ರಜ್ಞ ಪೀಟರ್ ಮಲ್‌ನಾರ್ ಅವರ ಅಭಿಪ್ರಾಯ. 'ಹಿಮಕರಡಿಗಳ ಸಂಖ್ಯೆ ಯಾವ ವರ್ಷದಿಂದ ಗಣನೀಯವಾಗಿ ಕಡಿಮೆಯಾಗಲಿವೆ ಎಂಬುದನ್ನು ನಿಖರವಾಗಿ ಅಂದಾಜು ಮಾಡಲು ಆಗಿಲ್ಲ. ಅದು ಈ ಶತಮಾನದ ಕೊನೆಯಲ್ಲಿ ಅಥವಾ ಮುಂದಿನ ಶತಮಾನದ ಆರಂಭದಲ್ಲಿ ನಡೆಯಬಹುದು' ಎನ್ನುತ್ತಾರೆ ಅವರು.

ಹವಾಮಾನ ವೈಪರೀತ್ಯಗಳು ಹಿಮಕರಡಿಗಳ ಮೇಲೆ ಉಂಟುಮಾಡುವ ಸಮಸ್ಯೆಗಳ ಎರಡು ಸಾಧ್ಯತೆಗಳನ್ನು ತಜ್ಞರು ಅಂದಾಜಿಸಿದ್ದಾರೆ. ಈಗಿನ ಪ್ರಮಾಣದಷ್ಟೇ ಹಸಿರುಮನೆ ಅನಿಲಗಳು (ಗ್ರೀನ್‌ಹೌಸ್ ಗ್ಯಾಸ್) ಹೊರಹೊಮ್ಮಿದರೆ ಈ ಶತಮಾನದ ಕೊನೆಯ ವೇಳೆಗೆ ಹಿಮಕರಡಿಗಳು ಕೆನಡಾದ ಕ್ವೀನ್ ಎಲಿಜಬೆತ್ ದ್ವೀಪಗಳಿಗೆ ಮಾತ್ರವೇ ಸೀಮಿತವಾಗುತ್ತವೆ, ಪೂರ್ಣ ನಾಮಾವಶೇಷವಾಗುವುದಿಲ್ಲ. ಒಂದು ವೇಳೆ ಮಾಲಿನ್ಯದ ಪ್ರಮಾಣ ಈಗಿರುವುದಕ್ಕಿಂತ ಕಡಿಮೆಯಾದರೂ 2080ರ ವೇಳೆಗೆ ಬಹುತೇಕ ಹಿಮಕರಡಿಗಳ ಸಂತಾನೋತ್ಪತ್ತಿ ಸಾಮರ್ಥ್ಯ ಕಡಿಮೆಯಾಗುತ್ತದೆ.

## ಉಪವಾಸದಿಂದ ಆಯುಸ್ಸು ಕ್ಷೀಣ

ಚಳಿಗಾಲದಲ್ಲಿ ಹೆಚ್ಚು ಚಟುವಟಿಕೆಯಿಂದ ಇರುವ ಹಿಮಕರಡಿಗಳು ಹೆಚ್ಚು ಆಹಾರ ಸೇವಿಸಿ, ಶಕ್ತಿಯನ್ನು ಮೈಗೂಡಿಸಿಕೊಳ್ಳುತ್ತವೆ. ಬೇಸಿಗೆಯಲ್ಲಿ ಅಥವಾ ಬೇಟೆ ಸಿಗದೆ ಸಮುದ್ರ ತೀರದಲ್ಲಿ ದಿನದೂಡುವಾಗ ಈ ಶಕ್ತಿಯನ್ನು ಬಳಸಿಕೊಳ್ಳುತ್ತವೆ. ಹಿಮಕರಡಿಗಳಿಗೆ ತಿಂಗಳುಗಟ್ಟಲೆ ಆಹಾರವಿಲ್ಲದೆ ಜೀವಿಸುವ ಸಾಮರ್ಥ್ಯವಿದೆ. ಆದರೆ ಇಂಥ ಉಪವಾಸಗಳಿಂದ ಅವುಗಳ ಸಂತಾನೋತ್ಪತ್ತಿ ಸಾಮರ್ಥ್ಯ, ಆರೋಗ್ಯ ಮತ್ತು ಆಯುಸ್ಸು ಕಡಿಮೆಯಾಗುತ್ತದೆ. ಅಲಸ್ಕಾದ ದಕ್ಷಿಣ ಬ್ಯುಫೋರ್ಟ್ ಸಮುದ್ರದ ಆಸುಪಾಸಿನಲ್ಲಿ ಈಗಾಗಲೇ ಶೇ 25ರಿಂದ 50ರಷ್ಟು ಹಿಮಕರಡಿಗಳ ಸಂಖ್ಯೆ ಕಡಿಮೆಯಾಗಿದೆ. ಹಿಮಕರಡಿಗಳ ದಕ್ಷಿಣದ ತುದಿಯ ಆವಾಸಸ್ಥಾನ ಎನಿಸಿರುವ ಪಶ್ಚಿಮ ಹ್ಯಡ್ಸನ್ ಕೊಲ್ಲಿಯಲ್ಲಿ 1987ರಿಂದೀಚೆಗೆ ಹಿಮಕರಡಿಗಳ ಸಂಖ್ಯೆ





**ಹ್ಯಾಪಿ ಬರ್ತ್‌ಡೇ...** ಬರ್ಲಿನ್ ನಗರದ ಮೃಗಾಲಯದಲ್ಲಿ ಹಿಮ ಕರಡಿಯ ಹುಟ್ಟುಹಬ್ಬ